(SRI H. SIDDAVEERAPPA.)

Sakleshpur, Channarayapatna, Arkalgud, Belur, Sravanabelagola and Shantigrama.

ಶ್ರೀ ಜೆ. ನಾರಾಯಣಪ್ಪ.—'ಬಿ' ಭಾಗದ ಪ್ರಶ್ನೆಗೆ ಒದಗಿಸಿರುವ ಉತ್ತರದ ಪರಿಶಿಷ್ಟದಲ್ಲಿ ನಮೂದಾಗಿರುವ ಪ್ರದೇಶಗಳಲ್ಲದೆ ಇನ್ನೂ ಕೆಲವು ಪ್ರದೇಶಗಳಲ್ಲಿ ಅಳತೆಯ ವಿಚಾರಕ್ಕೆ ಸಂಬಂಧಿಸಿದ ಕಾನೂನು ಅನ್ವಯವಾಗುವ ಅವಶ್ಯಕತೆ ಇದೆಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೆಲ್ಲಿಗಾದರೂ ಇದನ್ನು extend ಮಾಡಬೇಕಾದ ಅವಶ್ಯಕತೆ ಇದ್ದರೆ, ಅದನ್ನು ಗಮನಕ್ಕೆ ತೆಗೆದುಕೊಂಡು ಬಂದರೆ extend ಮಾಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಹಳ್ಳಿಗಳಲ್ಲಿ ಚಿಲ್ಲರೆ ವ್ಯಾಪಾರಸ್ಥರು ಬಂದು ಅಳತೆಯಲ್ಲಿ ರೈತರಿಗೆ ಮೋಸಮಾಡಿ ಪದಾರ್ಥಗಳನ್ನು ಸಾಗಿಸಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿರ್ದಿಷ್ಟವಾದ ಯಾವ ಕೇಸು ಸಹ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಸದ್ಯಕ್ಕೆ ಪಟೇಲ್ ಶ್ಯಾನುಭೋಗರಿಗೂ, ವ್ಯಾಪಾರಸ್ಥರಿಗೂ ಈ ಬಗ್ಗೆ ಹಂಗಾಮಿಯಾಗಿ ಸರ್‌ಕ್ಯುಲರ್ ಕಳುಹಿಸಿ ಈ ಅಳತೆಯ ವ್ಯವಹಾರವನ್ನು ನಿರಪಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ದೃಷ್ಟಿಯಿಂದ ಇದು ಸರಿಯೇ ಎಂಬುದನ್ನು ಯೋಚಿಸಬೇಕು.

ಶ್ರೀ ಜಿ. ಬಸಪ್ಪ.—Weights and Measures Departmentನಿಂದ ವರ್ಷಕ್ಕೆ ಎಷ್ಟು ಆದಾಯ ಬರುತ್ತಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

Takavi Loans to raiyats in Kudligi Taluk.

Q.—699. SRI K. KOTRABASAVANA GOWD (Kudligi).—

Will the Govenment be pleased to state :—

(*a*) the amount of Takavi loans disbursed to Kudligi Taluk raiyats ;

(*b*) the number of bona fide raiyats benefited by such loans ;

(*c*) whether they will take steps to help the raiyats by granting further takavi loans, etc., in view of poor rainfall in the taluk ;

(*d*) whether they will take steps to supply good seeds to raiyats ;

(*e*) in view of the hard conditions prevailing in the taluk whether they will postpone the collection of takavi and agriculture loans ?

A.—Sri Kadidal MANJAPPA (Minister for Revenue and Public Works).—

(*a*) Rs. 25,000.

(*b*) 58.

(*c*) Yes.

(*d*) Yes.

(*e*) In view of the improved seasonal conditions this year there is no necessity to postpone the collection of loans.

ಶ್ರೀ ಕೊಟ್ರಬಸವನಗೌಡ.—'ಬಿ' ಪ್ರಶ್ನೆಗೆ ಉತ್ತರವಾಗಿ ತಕಾವಿ ಸಾಲದ ಸ್ಕೀರ್ಯ ಪಡೆದಿರುವ bona fide ರೈತರ ಸಂಖ್ಯೆ 58 ಎಂದು ತಿಳಿಸಿದ್ದೀರಿ. Bona fide ರೈತರು ಎಂದರೆ ಭೂಮಿಯನ್ನು ಹೊಂದಿರುವವರು ಮತ್ತು ಅದರಿಂದಲೇ ಜೀವನ ಜರುಗಿಸಿಕೊಳ್ಳುತ್ತಿರುವವರು ಎಂದು ನಾನು ತಿಳಿದಿದ್ದೇನೆ. ಹೀಗಿರುವಾಗ ಭೂಮಿ ಇರತಕ್ಕ ಕೆಲವರಿಗೆ ನೀವು ರೈತರಲ್ಲ ಎಂದು endorsement ಕೊಟ್ಟಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೊಟ್ರಬಸವನಗೌಡ.—ತಕಾವಿ ಸಾಲಗಳನ್ನು ಯಾರಿಗೆ ಕೊಡಬೇಕೆಂಬುದನ್ನು ಸರ್ಕಾರದ ನೀತಿ ?

ಶ್ರೀ ಕಡಿದಾಳ್ ಮಂಜಪ್ಪ.—bona fide Agriculturistಗೆ ತಕಾವಿ ಸಾಲ ಕೊಡಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀ ಕೊಟ್ರಬಸವನಗೌಡ.—ಈ ವಿಚಾರದಲ್ಲಿ ಬೇರೆ ರೀತಿಯಲ್ಲಿ ವರ್ತಿಸಿರುವುದನ್ನು ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಗಮನಕ್ಕೆ ತನ್ನಿ. ಅದು ನಿಜವಾಗಿದ್ದರೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೊಟ್ರಬಸವನಗೌಡ.—ತಕಾವಿ ಸಾಲವನ್ನು ಶೇಕಡ 10-12 ರಷ್ಟು ಬಡ್ಡಿದರದ ಮೇಲೆ ಕೊಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೊಟ್ರಬಸವನಗೌಡ.—ಈ ಬಗ್ಗೆ ಏನಾದರೂ ವರದಿಮಾಡಿದರೆ enquiry ಮಾಡುವುದಿಲ್ಲ. ಕಾನೂನು ಪ್ರಕಾರ ಆಗುತ್ತಿದೆಯೆಂದು ಹೇಳುತ್ತಾರೆ. ಈ ಬಗ್ಗೆ ಲಂಚ ರುಷುವತ್ತುಗಳನ್ನು ಕೊಡದಂತೆ ಹೇಗೆ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಅದು ವಿಚಾರಣೆಯಾಗಬೇಕು.

ಶ್ರೀ ಕೊಟ್ರಬಸವನಗೌಡ.—ಈ ಬಗ್ಗೆ ವರದಿ ಮಾಡಿದರೆ ಅಧಿಕಾರಿಗಳು ಅವರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಹಾಗೆ ಮಾಡಿದರೂ ಅಂಥವರ ಮೇಲೆ ಕಾರ್ಯಕ್ರಮ ಕೈಗೊಳ್ಳುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅಂತಹ ಕೇಸುಗಳನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬನ್ನಿ, ಸೂಕ್ತವಾದ ರೀತಿಯಲ್ಲಿ enquiry ಮಾಡಿಸಲಾಗುತ್ತದೆ.

ಶ್ರೀ ಕೊಟ್ರಬಸವನಗೌಡ.—ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ರೈತರಿಗೆ ಒದಗಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಒದಗಿಸುತ್ತಿದ್ದೇವೆ.